Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 218] ಬುಧವಾರ 11–8–48 [ಬಿಡಿ ಪ್ರತಿ 3 ಪೈ

ಜೂ ಆಖೈರ್ ವರಿಗೆ ಇದೇ ಮಂತ್ರಿಮಂಡಲ

ಬೆಂಗಳೂರು, ಆ 10

ಮೈಸೂರಿನ ಪ್ರಸಕ್ತ ಮಂತ್ರಿಮಂಡಲ 1949 ನೇ ಜೂ ಕಡೆಯವರಿಗೆ ಅಧಿಕಾರರೂಢವಾಗಿರುವುದು

— ಎಂದು ಮೈಸೂರು ಘಟನಾ ಸಮಿತಿ ಅಧ್ಯಕ್ಷ ಶ್ರೀ ತಾಳಿಕೆರೆ ಸುಬ್ರಹ್ಮಣ್ಯಂ ಸೆಂಟ್ ಜೋಸೆಫ್ ಕಾಲೇಜ್ ಸಂಘದ ಆರಂಭೋತ್ಸವ ನೆರವೇರಿಸುತ್ತಾ ನುಡಿದರು.

ಮೈಸೂರು ರಾಜ್ಯಾಂಗ ಘಟನೆ ನಿರ್ಮಾಣ ಮಂದಗತಿಯಿಂದ ಹೋಗುತ್ತಿರುವ ಬಗ್ಗೆ ಅವರು ವಿವರಣೆಯಿತ್ತು ತ್ತಾ, ' ಈಗಿರುವ ಸಚಿವ ಮಂಡಲಕ್ಕೆ ಜೀವದಾನ ಮಾಡಿಕೊಡಬೇಕು ಎಂಬ ದೃಷ್ಟಿಯಿಂದಲ್ಲ ' ಎಂದು ತಿಳಿಸಿದರು

ಲಾ ಅಸೋಸಿಯೇಷನ್ ನಿರ್ಣಯ

ಬೆಂಗಳೂರು, ಆ 10 — ಶ್ರೀ ಕೆ ಎಸ್ ಶ್ರೀನಿವಾಸರವರ ಅಧ್ಯಕ್ಷತೆಯಲ್ಲಿ ಬಾರ್ ಅಸೋಸಿಯೇಷನ್ ಸಭೆಗೂಡಿ ಈ ನಿರ್ಣಯ ಮಾಡಿದೆ —

12 ನೇ ತಾರೀಖು ಹೈಕೋರ್ಟಿನ ಫುಲ್ ಬೆಂಚ್ ಮುಂದೆ ಬರುವ ವಿಚಾರಣೆ ಸ್ವಾತಂತ್ರ್ಯ ಮತ್ತು ಕಾನೂನುಗಳ ಪ್ರಮುಖ ವಿಷಯಗಳಿಗೆ ಸಂಬಂಧಿಸಿರುವುದರಿಂದ ಈ ವಿಚಾರಣೆ ಸಮಯದಲ್ಲಿ ಲಾ ಅಸೋಸಿಯೇಷನ್ ಪ್ರತಿನಿಧಿಸಲ್ಪಡುವುದು ಹೈಕೋರ್ಟಿನ ಅನುಮತಿ ಬೇಡುತ್ತದೆ.

ಹೈದರಾಬಾದಿನ ಹರಿಜನ ಮಂತ್ರಿ ಶ್ರೀ ಬಿ ಎಸ್ ವೆಂಕಟರಾವ್ ಸಮಾಜ ಘಾತುಕತನ ಖಂಡಿಸುವ ನಿರ್ಣಯಗಳನ್ನು ಷೋಲಾಪುರದಲ್ಲಿ ಸೇರಿದ್ದ ನಿಮ್ನವರ್ಗ ಪರಿಷತ್ತಿನಲ್ಲಿ ಅಂಗೀಕರಿಸಲಾಯಿತು

ವುಡ್ ಲ್ಯಾಂಡ್ಸ್

6–8–48 ರಿಂದ

ಲಲಿತ ಪವಾರ್, ನಾಯಂಪಳ್ಳಿ ಡೇವಿಡ್, ಸತ್ಯಪಾಲ್ ನಟಿಸಿರುವ

ಜನತ Janata

ಮೈಸೂರು ಸಂಸ್ಥಾನದಲ್ಲಿ ಪ್ರಥಮ ಪ್ರದರ್ಶನ – ಅತ್ಯಮೋಘ ಹಿಂದಿ ಚಿತ್ರ

ಪ್ರತಿದಿನ 3 ಆಟಗಳು

— ಮುಂದಿನ ವಿನೋದ —

ಅತ್ಯದ್ಭುತ ಜನಪ್ರಿಯ ಚಿತ್ರ

We Two

ನಾವು ಇಬರು

ಹೈದರಾಬಾದ್ ಆರೋಗ್ಯ ಮಂತ್ರಿಯವರ ರಾಜೀನಾಮೆ ಅರ್ಪಣೆ

ಸುದ್ದಿಗಳು

ಬೆಂಗಳೂರು ಕಂಟೋನ್ಮೆಂಟ್ ಪ್ರಾರಸಭೆ ರಾಜಾಜಿಗೆ ಪ್ರತ್ಯೇಕ ಬಿನ್ನವತ್ತಳೆ ಅರ್ಪಿಸುವ ಬಗ್ಗೆ ಸರ್ಕಾರದ ಅಪ್ಪಣೆ ದೊರೆತಿದೆ.

ಕಾಶ್ಮೀರ ಏಕ್ಯಮುಣಾರಂಭ ಮುನ್ನ ಪಾಕೀಸ್ತಾನದಿಂದ ಸಂಧಾನಕ್ಕಾಗಿ ನನಗೆ ಆಹ್ವಾನ ಬಂತು. ಆಹ್ವಾನವನ್ನು ಮನ್ನಿಸಿದ್ದರೆ ನಾನು ಪಾಕೀಸ್ತಾನದ ಸೆರೆಯಾಳಾಗುತ್ತಿದ್ದೆ. ಕಾಶ್ಮೀರಿಗಳು ಪಾಕೀಸ್ತಾನ ಸೇರಬೇಕು ಎಂದು ಸನ್ನ ಹೇಳಿಕೆಯಿತ್ತು ಮೋಸ ಮಾಡಲು ಮೌ[illegible] ಪೂರ್ವಾನುಗ್ರಹದಿಂದ ಫಲವಿಲ್ಲ

ಎಂದು ಪ್ರಧಾನಿ ಷೇ[illegible] ಕಾಶ್ಮೀರದಲ್ಲಿ ಈದ್ [illegible] ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ಸಂಡೂರು ಸಂಸ್ಥಾನವನ್ನು ಸ್ವತಂತ್ರವೆಂದು ಘೋಷಿಸಲು ಪ್ರಯತ್ನವಾಗುತ್ತಿದೆಯೆಂದು ವಂದಿ

ಬೂಂಬಾಯಿ ಪೌಂಸಭೆ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ಬೊಂಬಾಯಿ ಪ್ರಾಂತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಕೆ. ಪಾಟೀಲ್ ರಾಜೀನಾಮೆಕೊಟ್ಟರು.

ವಂದಂತಾಸಿನಲ್ಲಿ ಮುಂದಿನ ಮಾಹೆ ತಾ || 5 ವತ್ತು 6 ರಲ್ಲಿ ಸರ್ವಾವೇಶವಾಗುವ ಭಾರತ ಡೊಮಿನಿಯನ್ ಮುಸ್ಲಿಂ ಕಲ್ಚರ್ ಸಮ್ಮೇಳನದಲ್ಲಿ ಹೈದರಾಬಾದ್ ಮತ್ತು ಕಾಶ್ಮೀರ ಸಮಸ್ಯೆಗಳನ್ನು ಪ್ರಾಮುಖ್ಯವಾಗಿ ಪರಿಶೀಲಿಸಲಾಗುವುದು.

ಸ್ವಾತಂತ್ರ್ಯೋತ್ಸವ ಪ್ರಯುಕ್ತ ಅಂಚೆ ಇಲಾಖೆಗೆ ತಾ || 16 ನೇ ಸೋಮವಾರ ರಜಾ ಕೊಡಲಾಗುವುದೆಂದು ಬೆಂಗಳೂರು ಸುದ್ದಿ

ಬರೋಡಾ ರಾಜಕೀಯ ಪರಿಸ್ಥಿತಿಯಲ್ಲಾದರು ಕಾಲುಕೆರೆದು ಜಗಳಕ್ಕೆ ಸಿದ್ಧವಿಲ್ಲ ಆದರೆ. ಅನಿವಾರ್ಯವಾದರೆ ಶಸ್ತ್ರ ಸನ್ನದ್ಧರಾಗಲು ನಾವು ಸಿದ್ಧ ಎಂದು ಪಂ || ನೆಹರು ಸ್ವಾತಂತ್ರ್ಯಾರಂಭ ಭಾಷಣ ಮಾಡುತ್ತಾ ದೆಹಲಿಯಲ್ಲಿ ತಿಳಿಸಿದ್ದಾರೆ

ತಾ || 15 ಮತ್ತು 16 ರಲ್ಲಿ ಶ್ರೀಮನ್ನ [illegible] ಜರು ಮುಂಡಜೀಕೆ

[illegible] ಪಟೇಲರು [illegible] ದ ಇದುವರಿಗೆ ಆದ 73 ಮಂದಿ ಸತ್ತು 9 ಗಿದೆಯೆಂದು ಅವರು ತಿಳಿಸಿದರ

ಚಿತ್ರದುರ್ಗ ' ನವೋದಯ ' ಕಾರ್ಯಾಲಯದಲ್ಲಿ ಕಳ್ಳತನ ಮಾಡಿ ಹನುಮಂತರಾವ್' ಎಂಬಾತನಿಗೆ [illegible] ಗಳು ಕಠಿಣ ಸಜೆ ವಿಧಿಸಲಾಗಿದೆ

ದೇಶದ ಎಲ್ಲ ಕಡೆಗೂ ಆಹಾರ ಸಾಗಿಸಲು ಭಾರತ ಸರ್ಕಾರ 40 ವಿಶೇಷ ರೈಲುಗಳನ್ನು ಏರ್ಪಡಿಸುವುದು

ಗಾಂಧೀಜೀ ಸ್ಮಾರಕ ಅಂಚೆ ಚೀಟಿಗಳ[illegible]

ಮೈಸೂರು, ಆ 11

ಭಾರತದ ಪ್ರಥಮ ಸ್ವಾತಂತ್ರ್ಯ ವರ್ಷ [illegible] ರ್ಷಿಕೋತ್ಸವ ಆಗಸ್ಟ್ ತಾ || 15 ರಲ್ಲಿ ಗಾಂಧೀಜೀ ಸ್ಮಾರಕ ಅಂಚೆ ಚೀಟಿಗಳು ಮಾರಾಟಕ್ಕಿಡಲ್ಪಡುವುದು ಆ ದಿನ ಭಾನುವಾರವಾಗಿದ್ದರೂ ಸಹ ಜನಗಳ ಪೂರೈಕೆಗಾಗಿ ಮೈಸೂರು ಪ್ರಧಾನ ಅಂಚೆ ಕಛೇರಿಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆ ವರೆಗೆ ಮಾರಾಟ ಮಾಡಲಾಗುವುದು

At Opera

7–8–48 ರಿಂದ

VISWAS

ಸುರೇಂದ್ರ, ಮೆಹತಾಬ್, ಬೇಬಿ ಮಾಧುರಿ ಪಾತ್ರವಹಿಸಿರುವ

ವಿಶ್ವಾಸ್

(ಅಮೋಘ ಹಿಂದಿ ಚಿತ್ರ)

.... ಪ್ರತಿದಿನ

ದಿಗ್ಬಂಧನದ ಪರಿಣಾಮ

ಹೈದರಾಬಾದಿನಲ್ಲಿ ಬಟ್ಟೆ ಅಭಾವ

ನಾಗಪುರ, ತಾ|| 30 — ಭಾರತ ಒಕ್ಕೂಟದ ಗಡಿಯಲ್ಲಿರುವ ಹೈದರಾಬಾದ ಜಿಲ್ಲೆಗಳಲ್ಲಿ ಬಟ್ಟೆಯ ಅಭಾವವು ಕಠಿಣವಾಗಿದೆ. ನಾಂದೇಡಯೆಂಬ ಜಿಲ್ಲೆಯ ಎಲ್ಲಾ ಜವುಳಿ ಅಂಗಡಿಗಳಿಗೆ ನಿಜಾಂರು ಬೀಗ ಮುದ್ರೆ ಹಾಕಿಸಿದ್ದಾರೆಂತಲೂ ಜನರಿಗೆ ಮೋಸ ಮಾಡಿ ಬಟ್ಟೆ ಮಾರಿದರೆಂದೂ ಆರೋಪ ಸುದ್ದಿಯುಂಟು. ನಿಜಾಮರಿಗೆ ತಮ್ಮ ಪೋಲೀಸ ಮತ್ತು ಮಿಲಿಟರಿಗೆ ಬಟ್ಟೆ ಪೂರೈಸಲು ಕುತ್ತಿಗೆಗೆ ಬಂದಿದೆಯೆಂತಲೂ ಈ ವಿಷಯದಲ್ಲಿ ಅವರು ಬಹಳ ಹೆಣಗುತ್ತಾರೆಂತಲೂ ಹೈದರಾಬಾದಿನಿಂದ ಬಂದ ಹಿಂದೂ ನಿರಾಶ್ರಿತರು ತಿಳಿಸಿರುತ್ತಾರೆ.

ಪದಾರ್ಥಗಳ ಬೆಲೆಗಳು ಹೆಚ್ಚಲು ಕಾರಣವೇನು

[illegible]ಷರು ಯುದ್ಧದ ನಿಮಿತ್ತವಾಗಿ [illegible]ದಷ್ಟು ಆಹಾರ ಸಾಮಾಗ್ರಿಗ[illegible] ಇತರ ಪದಾರ್ಥಗಳನ್ನೂ ಶೇಖ[illegible]ಸಲಿಕತ್ತಿ, ಇಂಡಿಯಾ ಕರೆಸಿಯ[illegible]ನೂ 172 ಕೋಟಿಗಳಿಂದ 1,200 ಕೋ[illegible]ಷ್ಟು [illegible]ನ್ನು ಶೇಖ[illegible]

[illegible]ಮಾನ್ಯ ಜೀವನಕ್ಕೂ ಜೀವನ ವಿಧಾನಕ್ಕೂ ಯಾವ [illegible]ಯು ತಾರತಮ್ಯವೂ ಇಲ್ಲದೆ ಹೋ[illegible]ತು. ಎಷ್ಟು ಬೆಲೆಯಾದರೂ ತಿನ್ನುವ [illegible]ನ್ಯಗಳನ್ನೂ ಇತರ ಪದಾರ್ಥಗಳನ್ನೂ ಮಿಲಿಟರಿ ಕಂಟ್ರಾಕ್ಟರರು ಕೊಳ್ಳಲಾರಂಭಿಸಿದರು. ಇದೇ ಬೆಲೆಗಳು ವಿಪರೀತವಾಗಿ ಹೆಚ್ಚಲು ಕಾರಣವು. ಎಷ್ಟು ಕಾಲದ ವರೆಗೂ ಅಧಿಕ ಚಲಾವಣೆಯು ಇರುತ್ತದೆಯೋ ಅದುವರೆಗೂ ಅವಶ್ಯಕ ವಸ್ತುಗಳ ಬೆಲೆಯು ತಗ್ಗುವದಿಲ್ಲ.

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at th Satyavadi Press, Chamaraj Agrahar Mysore,

ವರ್ತಮಾನ ಸಂಗ್ರಹ

ಕೇಂದ್ರ ಶಾಸನ ಸಭೆಯಲ್ಲಿ ವಸತಿ ಸಮಸ್ಯೆ ಮೇಲೆ ತೀವ್ರ ಪ್ರಶ್ನೆ ಎದ್ದು, ಪಂ|| ನೆಹರುರವರು ಚರ್ಚೆಯಲ್ಲಿ ಪ್ರವೇಶಿಸಿ, ಅಗತ್ಯವಾಗಿ ಬೇಕಾಗಿರುವುದು ದೊರೆಯುವ ತನಕ ಭಾರತದಲ್ಲಿ ಒಂದು ಸಿನೀಮಾನನ್ನಾಗಲೀ ನಿರ್ಮಿಸಕೂಡದು. ಭಾರಿ ಭಾರಿ ಕಟ್ಟಡಗಳನ್ನು ಸಹ ನಿರ್ಮಿಸುವ ಬಗ್ಗೆ ಸರ್ಕಾರದ ಕಟ್ಟಪ್ಪಣೆ ಪಡಿಯಬೇಕು ಎಂದು ಪ್ರಾಂತೀಯ ಪ್ರಭುತ್ವಗಳಿಗೆ ತಿಳಿಸಲಾಗಿದೆ ಎಂದು ನುಡಿದರು.

ಪಾಕೀಸ್ತಾನ ಪ್ರಾರಂಭ ಪ್ರಥಮ ವಾರ್ಷಿಕೋತ್ಸವದಲ್ಲಿ ಗವರ್ನರ್ ಜನರಲ್ ಶ್ರೀ ಜಿನ್ನಾರವರು ಭಾಗ ವಹಿಸುವುದಿಲ್ಲವೆಂದು ತಿಳಿಸಿದ್ದಾರೆ.

ಭಾರತ ನಿಯೋಗ ಪಾರ್ಲಿಮೆಂಟರಿ ಸದಸ್ಯರಾಗಿ ಮೈಸೂರಿನ ಭಾರತ ರಾಜ್ಯಾಂಗ ಸಭಾ ಸಭ್ಯ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಸೆಪ್ಟಂಬರ್ ತಾ|| 25 ರಲ್ಲಿ ಇಂಗ್ಲೆಂಡಿಗೆ ತೆರಳುವರು.

ಮೈಸೂರು ಜಿಲ್ಲೆಗಳ ಅರಣ್ಯಗಳಲ್ಲಿ ಹರಾಜಿಗೆಂದು ಪ್ರಕಟಿಸಲ್ಪಟ್ಟಿದ್ದ ರೂ 20000 ಕ್ಕೆ ಮೇಲ್ಪಟ್ಟು ಬೆಲೆ ಬಾಳುವ ಮರಮುಟ್ಟುಗಳು ಮಾಯವಾಗಿವೆ.

[illegible]ಯಿತ್ತಷ್ಟೆ.

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಶಕ್ತಿ ಸುಧಾ :

ದೇಹಪುಷ್ಟಿಗೆ

ಮುಖಕಾಂತಿಗೆ

ಶಕ್ತಿ ಸಾಧನೆಗೆ

ಸಂಜೀವನ

ಶಕಿಸುಧಾ

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದ ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದ. ನಮ್ಮಿಂದ ಸ್ಪಷ್ಟವಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೊಳಪಿನಿಂದಲೂ, ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. 1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು